ತುಮಕೂರು ಮಹಾನಗರ ಮಧ್ಯ ಕಸಾಯಿ ಖಾನೆ ಸ್ಥಾಪನೆಯಿಂದ ಪರಿಸರ ಮಾಲಿನ್ಯ

2126 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಮಹಾನಗರದ ಮಧ್ಯಭಾಗದಲ್ಲಿ ಕಸಾಯಿಖಾನೆ ಸ್ಥಾಪಿಸಿರುವುದರಿಂದ ಅಲ್ಲಿ ವಾಸಿಸುವ ನಾಗರೀಕರ ಆರೋಗ್ಯಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆಕ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಬದಲಾಯಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಇಲ್ಲಾ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶಿರ್ಶಿಯ ಕೆ .ಹೆಚ.ಬಿ ಕಾಲೋನಿಯ ಮನೆಗಳ ವ್ಯವಸ್ಥೆ

2127 - ಶ್ರೀ ಜಯವಂತ್ ಪಿ.ಎಸ್. (ಸಿಸಿ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿರ್ಶಿಯಲ್ಲಿ ಕೆ.ಹೆಚ್.ಬಿ.ಯಿಂದ ಕಟ್ಟಿದ ಮನೆಗಳೆಷ್ಟು (ವಿವರವಾಗಿ ಸೈಜುಗಳಲ್ಲಿ ಒದಗಿಸುವುದು)*

ಆ) *ರಸ್ತೆಗಳಿಗೆ ಸೊಆಂಗ ಮೆಟಲಿಂಗ್ ಹಾಗೂ ಡಾಂಬರೀಕರಣ ಮಾಡಲಾಗಿದೆಯೇ?*

ನೀರು ಹಾಗೂ ರಸ್ತೆ ದೀಪದ ವ್ಯವಸ್ಥೆ ಮಾಡಲಾಗಿದೆಯೇ?

ಇ) *ಮನೆಗಾಗಿ ಅರ್ಜಿ ಹಾಕಿ ಹಣ ತುಂಬಿದವರಿಗೆ ಮಂಜೂರು ಮಾಡಲಾಗಿದೆಯೇ?*

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಗೃಹ ಮಂಡಳಿವತಿಯಿಂದ ಶಿರ್ಶಿಯಲ್ಲಿ ಕಟ್ಟಿರುವ ಮನೆಗಳ ವಿವರ ಈ ಕೆಳಕಂಡಂತಿದೆ.

1) ನಾನ್ ಹುಡ್ಕೋ - 61

2) ಹುಡ್ಕೋ 1ನೇ ಹಂತ - 125